# ಮಾದರಿ ಪ್ರಶ್ನೆಪತ್ರಿಕೆ ೨

## ಪ್ರಥಮ ಭಾಷೆ ಕನ್ನಡ        ೧೦ ನೇ ತರಗತಿ

## ಗರಿಷ್ಠ ಅಂಕ: ೧೦೦        ಅವಧಿ : ೨.೪೫  ಗಂಟೆಗಳು

### ಭಾಗ -'ಎ'

(ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು )

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧=೧೧**

೧. ಅಮೇರಿಕದ ವಿದಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯದ ಭಾಗಗಳು ಯಾವುವು?

೨. ಅಂತರ್ಜೀವಿಯ ಶಕ್ತಿಯು ಹೇಗೆ ವೆಚ್ಚವಾಗುತ್ತಿರುತ್ತದೆ ?

೩. ಶ್ರೀವೈಷ್ಣವರಿಗೆ ಮಹಾರಾಜನು ಏನು ಹೇಳಿದನು ?

೪. ಭಾರತ ಸರ್ಕಾರವು ವಿಶ್ವೇಶ್ವರಯ್ಯನವರಿಗೆ ನೀಡಿದ ಪ್ರಶಸ್ತಿ ಯಾವುದು ?

೫. ಮನೆಮಂಚಮ್ಮ ಎಲ್ಲಿ ಪೂಜಿತಳಾಗುತ್ತಿದ್ದಾಳೆ ?

೬. ಯಾರು ಯಾರಿಂದಲೂ ಗಾಂಡೀವಿಯನ್ನು ಗೆಲ್ಲುವುದು ಸಾಧ್ಯವಾಗಿಲ್ಲ ?

೭. ಹಕ್ಕಿಯು ಯಾವುದರ ಸಂಕೇತವಾಗಿದೆ ?

೮. ಕುಂಪಣಿ ಸರಕಾರ ಹೊರಡಿಸಿದ ಆದೇಶ ಯಾವುದು ?

೯. ಬಿಳಿಯ ಕೊಳ ಎಲ್ಲಿದೆ ?

೧೦. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

೧೧. ಜೋಡಿ ಪಾರಿವಾಳಗಳು ಹೇಗೆ ಬಾಳಿದವು ?

**ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨ =೧೮**

೧೨. ಶಬರಿಗೆ ಮೋಕ್ಷ ಕರುಣಿಸಿದ ರಾಮನು ಅವಳ ಕುರಿತು ಹೇಳಿದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

೧೩. ರಾಮನ ಬರುವಿಕೆಗೆ ಶಬರಿ ಕಾಯುತ್ತಿದ್ದ ಬಗೆಯನ್ನುವಿವರಿಸಿ.

೧೪. ರಾಮಾನುಜಾಚಾರ್ಯರ ಗುಣವಿಶೇಷತೆ ಧರ್ಮಸಮದೃಷ್ಟಿ ಪಾಠದಲ್ಲಿ ಹೇಗೆ ವ್ಯಕ್ತವಾಗಿದೆ ?

೧೫. ಇಂದಲ್ಲ ನಾಳೆ ಫಲ ಕೊಡುವ ಅಂಶಗಳು ಯಾವುವು ?

೧೬. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

೧೭. ಚಂಚಲ ಮನಸ್ಸು ಮತ್ತು ಸ್ವಭಾವದ ಕುರಿತು ಬಸವಣ್ಣನವರು ಏನು ಹೇಳಿದ್ದಾರೆ ?

೧೮. ನುಡಿಯು ಹೇಗಿರಬೇಕೆಂದು ಬಸವಣ್ಣನವರ ಅಭಿಪ್ರಾಯವಾಗಿದೆ ?

೧೯. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ ?

೨೦.ಒಗಟುಗಳಿಂದ ವಿದ್ಯಾರ್ಥಿಗಳಾದ ನಿಮಗೆ ಆಗುವ ಪ್ರಯೋಜನವೇನು ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೬**

೨೧.''ಕೈಯಿಂದ ಇದನ್ನು ಮಾಡುವುದು ಹೇಗೋ ''

೨೨. ''ಕೈಗಾರಿಕೀಕರಣ ಇಲ್ಲವೇ ಅವನತಿ ''

೨೩. ''ಜೀವಗಳು ಶವವಾದವು''

೨೪. ''ಪಗೆಗೆ ಕಣೆಯೊಂದುಂಟೇ ''

## ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬

೨೫. ವಿ.ಕೃ.ಗೋಕಾಕ

೨೬. ದ.ರಾ. ಬೇಂದ್ರೆ.

## ೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ ೧*೪=೪

ಮಾರಿಗೌತಣ-------------

--------------------------

-----------------------

--------------------------

------------------------

----------------------ಸಖನಾಣೆ .

ಅಥವಾ

ಯುಗ ಯುಗಗಳ --- –

–-----------------------

–--------------------

–--------------------

–------------- ನೋಡಿದಿರಾ ?

## ೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ |
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ |
ಮಿಗೆ ನಡುಗಿ ಬೇಡಬೇಡ ರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ||
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ |
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ |
ನಗಡುತನದಿಂದ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

ಪ್ರಶ್ನೆಗಳು :

೧.ಲವನು ಕುದುರೆಯನ್ನು ಹೇಗೆ ಕಟ್ಟಿದನು ?

೨.ಋಷಿಪುತ್ರರು ಲವನಿಗೆ ಏನೆಂದು ಬಿನ್ನವಿಸಿಕೊಂಡರು ?

೩.ಋಷಿ ಪುತ್ರರಿಗೆ ಲವನು ನೀಡಿದ ಉತ್ತರವೇನು ?

೪. ಈ ನುಡಿಯಲ್ಲಿ ನಿಮಗೆ ಮೆಚ್ಚಿಕ್ಕೆಯಾದ ಅಂಶ ಯಾವುದು ಏಕೆ ?

## ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯. ವ್ಯಾಪಾರದಿಂದ ಗಳಿಸಿದ ಸಂಪತ್ತನ್ನು ತಾನೇ ಅನುಭವಿಸಲು ದುಷ್ಟಬುದ್ಧಿ ಮಾಡಿದ ತಂತ್ರವೇನು ?

ಅಥವಾ

ತನ್ನ ಮೇಲಿನ ಆರೋಪವನ್ನು ಧರ್ಮಬುದ್ಧಿಯು ಹೇಗೆ ಹೋಗಲಾಡಿಸಿಕೊಂಡನು ?

೩೦. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

## ೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ಇತ್ತ ಶಾನುಭೋಗರಿಗೆ ಇದ್ದಕ್ಕಿದ್ದ ಹಾಗೆಯೇ ಮನಸ್ಸಿನಲ್ಲಿ ಅಳುಕು ಹುಟ್ಟಿತು.ಪಂಚೇಂದ್ರಿಯಗಳಿಗೆ ಗೋಚರವಾಗದಿರುವಂತ ಅಪಾಯವನ್ನು ಸೂಚಿಸುವ ಆರನೆಯ ಇಂದ್ರಿಯವೊಂದಿದೆಯೆಂದು ಬಲ್ಲವರು ಹೇಳುತ್ತಾರೆ.ಶಾನುಭೋಗರಲ್ಲಿ ಆ ಇಂದ್ರಿಯ ಜಾಗೃತವಾಗಿ ಹುಲಿ ಬಂದಿದ್ದು ಅವರಿಗೆ ತಿಳಿಯಿತು . ಹುಲಿಯೇ ಆದರೂ ಅದು ಹಿಂದಿನಿಂದ ಮೇಲೆ ಬೀಳುವುದಿಲ್ಲವೆಂದು ಶಾನುಭೋಗರು ಬಲ್ಲರು .ಹುಲಿಗೆ ಹೊಳೆದ ಯೋಚನೆಯೇ ಅವರಿಗೂ ಹೊಳೆಯಿತು.ಹುಲಿ ಹತ್ತಿರ ಬಂದು ನೆಗೆಯಿತು.ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಶಾನುಭೋಗರು ಸ್ವಲ್ಪ ಬಾಗಿದರು.ಹುಲಿ ನೆಲಕ್ಕೆ ಇಳಿದು ತಮ್ಮ ಕಡೆಗೆ ತಿರುಗುವುದರೊಳಗೆ ಅವರೂ ಹಿಂದಿರುಗಿ ಬಂದ ದಾರಿಯಲ್ಲೇ ಪುನಃ ನಡೆದರು.ಹುಲಿ ಕತ್ತೆತ್ತಿ ನೋಡಿದರೆ ಶಾನುಭೋಗರು ಮತ್ತೆ ತನ್ನ ಕಡೆಗೆ ಬೆನ್ನು ತಿರುಗಿಸಿದ್ದಾರೆ.

ಪ್ರಶ್ನೆಗಳು :

೧. ಹುಲಿಯು ತಮ್ಮ ಹಿಂದೆ ಬರುತ್ತಿರುವುದನ್ನು ಶಾನುಭೋಗರು ಹೇಗೆ ಗ್ರಹಿಸಿದರು ?

೨. ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಏನು ಮಾಡಿದರು ?

## ಭಾಗ- 'ಬಿ'

(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು-೨೦ ಅಂಕಗಳು )

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. ೧೦*೧=೧೦

೩೨. 'ಬೇಗಬೇಗ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ. ----

ಎ) ನುಡಿಗಟ್ಟು ಬಿ) ದ್ವಿರುಕ್ತಿ ಸಿ )ಜೋಡುನುಡಿ ಡಿ )ಅನುಕರಣಾವ್ಯಯ

೩೩. <u>ಸೈತಾನ ಹಿಂದಿರುಗು ಎಂದುಕೊಂಡಿತು.</u> ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆಯಿದು ....

ಎ) ಉದ್ಧರಣ ಬಿ )ವಾಕ್ಯವೇಷ್ಠನ ಸಿ ) ಅರ್ಧವಿರಾಮ ಡಿ )ಭಾವಸೂಚಕ

೩೪. 'ಇದಾದ ಅನಂತರ ನಾನು ಇನ್ನೂ ಮೂರು ನಾಲ್ಕು ದಿನ ಅದೇ ಸ್ಕೂಲಿಗೆ ಹೋಗಿ ,ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರದ ಸಂಭಾಷಣೆ ನಡೆಸಿದೆ.' ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಸೇರಿದೆ .

೩೫. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ----

ಎ) ೧೦ ಬಿ) ೨೫ ಸಿ )೯ ಡಿ )೩೨

೩೬. ' ಪಂಚತಂತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ .

ಎ) ದ್ವಂದ್ವ ಸಮಾಸ ಬಿ) ಕ್ರಿಯಾ ಸಮಾಸ ಸಿ )ಅಂಶಿ ಸಮಾಸ ಡಿ )ದ್ವಿಗು ಸಮಾಸ

೩೭. 'ಅತ್ಯಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ .

ಎ) ಯಣ್ ಸಂಧಿ ಬಿ ) ಲೋಪ ಸಂಧಿ ಸಿ) ಆದೇಶ ಸಂಧಿ ಡಿ )ವೃದ್ಧಿ ಸಂಧಿ

೩೮. 'ಬುದ್ಧನನ್ನು' ಪದದಲ್ಲಿರುವ ವಿಭಕ್ತಿಯಿದು ------

ಎ) ಪ್ರಥಮಾ ಬಿ) ದ್ವಿತೀಯಾ ಸಿ) ತೃತೀಯಾ ಡಿ )ಚತುರ್ಥಿ

೩೯. 'ಬೀಯ' ಪದದ ತತ್ಸಮ ರೂಪವಿದು ------

ಎ) ವೆಚ್ಚ ಬಿ) ಬಾಯಿ ಸಿ)ವ್ಯಯ ಡಿ )ಖರ್ಚು

೪೦. 'ಸಕ್ಕಾರಿ' ಪದದ ಗ್ರಾಂಥಿಕ ರೂಪವಿದು -----

ಎ) ಸಕ್ಕರೆ ಬಿ) ಸಕ್ಕಾರೆ ಸಿ )ಸರಕಾರ ಡಿ) ಶಕ್ಕಾರಿ

೪೧. 'ಬಳೆಗಾರ್ತಿ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ) ತದ್ಧಿತಾಂತ ಭಾವನಾಮ ಬಿ ) ತದ್ಧಿತಾಂತಾವ್ಯಯ ಸಿ )ಕೃದಂತನಾಮ ಡಿ )ತದ್ಧಿತಾಂತ ನಾಮ

## ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.೪*೧=೪

೪೨. ಗುಜುಗುಜು : ಅನುಕರಣಾವ್ಯಯ : : ಕಾಡು ಮೇಡು : ---------

೪೩. ಭೀಮ : ಅಂಕಿತನಾಮ : : ವಿಜ್ಞಾನಿ : ---------

೪೪.ಬೀಳಲಿ : ವಿಧ್ಯರ್ಥಕ : : ಬಿದ್ದೀತು :-----

೪೫. ಬಾಳುವ : ವರ್ತಮಾನ ಕೃದಂತ : : ಬಾಳದ : ---

೪೬. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂಧು

ಅಥವಾ

ಭಾನುವೆ ಸಾಲದೆ ಪಗಲೆನಿ

ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

ೞ೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩

'ಪೆರ್ಮರನುಳಿವಂತೆ ನೀನುಳಿದೆ'

ಅಥವಾ

'ಕಣ್ಣಿನ ತೋರಣ'

ಭಾಗ -'ಸಿ'

(ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.)

ೞ೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩

* ಕೋಪದಲ್ಲಿ ಕೊಯ್ದುಮೂಗು ಮತ್ತೆ ಬಂದೀತೇ ?
* ಮಾತೇಮುತ್ತು ; ಮಾತೇ ಮೃತ್ಯು.
* ತಾಳಿದವನು ಬಾಳಿಯಾನು

ೞ೯. ನಿಮ್ಮ ವಾರ್ಷಿಕ ಪರೀಕ್ಷೆ ಸಿದ್ಧತೆಯನ್ನು ತಿಳಿಸಿ ಹಾಸನದಲ್ಲಿರುವ ನಿಮ್ಮ ಗೆಳೆಯ /ಗೆಳತಿ (ಧ್ರುವ ಅಥವಾ ಧೃತಿ )ಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಊರಿನ ರಸ್ತೆ ಸರಿಪಡಿಸಿಕೊಡುವಂತೆ ಕೋರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

* ವಿಜ್ಞಾನ ಮತ್ತು ಮೂಢನಂಬಿಕೆ
* ಹವ್ಯಾಸಗಳು
* ವಿದ್ಯಾರ್ಥಿಗಳ ಮೇಲೆ ಮಾಧ್ಯಮದ ಪ್ರಭಾವಗಳು

****************************************************************